**SUBJECT CODE: 392**

# 2020

## ಕನ್ನಡ ಪತ್ರಿಕೆ-I

| ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 150 |
|---|---|

## Kannada (Paper–I)

| Time : 3 Hours | Maximum Marks : 150 |
|---|---|

### SPECIFIC INSTRUCTIONS
ನಿರ್ದಿಷ್ಟ ಸೂಚನೆಗಳು

*(i)* Candidates have to attempt all questions.
**ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು**

*(ii)* Marks carried by each question are indicated at its end.
**ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.**

### SECTION—A / ವಿಭಾಗ—A

**1. ಈ ಕೆಳಗಿನ ವಿಷಯವನ್ನು ಕುರಿತು 300 ಪದಗಳಿಗೆ ಮೀರದಂತೆ ಪ್ರಬಂಧ ರಚಿಸಿ.** [25]

**ಬರ ಮತ್ತು ನೆರೆಹಾವಳಿ**

**2. ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿಕೊಂಡು ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಒಂದು ಕುಗ್ರಾಮದಲ್ಲಿ ಚತುರನಾದ ನಾಪಿತ ವಾಸವಾಗಿದ್ದ, ಅದೇ ಗ್ರಾಮದ ಪಂಚಾಂಗ ಹೇಳುವ ಮುಗ್ಧ ಬ್ರಾಹ್ಮಣನೊಂದಿಗೆ ಗೆಳೆತನವನ್ನಿಟ್ಟುಕೊಂಡಿದ್ದ, ಅವನ ಮಾತುಗಳನ್ನು ಕೇಳುತ್ತಿದ್ದ. ಆ ಗ್ರಾಮಕ್ಕೆ ನಾಲ್ಕು ಯೋಜನಗಳ ದೂರದಲ್ಲಿದ್ದ ಮಹಾಕ್ಷೇತ್ರದಲ್ಲಿ ಮಹಾದೇವನ ಜಾತ್ರೆ ನಡೆಯುತ್ತಿತ್ತು. ದೇಶ-ದೇಶಗಳಿಂದ ಅನೇಕ ಜನರು ಬರುತ್ತಿದ್ದರು. ವಾಲಗ ಊದುವುದರಲ್ಲಿ ಪ್ರವೀಣನಾಗಿದ್ದ ನಾಪಿತನು, ದೇವರ ಕೆಲಸವೂ, ಸಂಪಾದನೆಯೂ ಆಗುತ್ತದೆ ಎಂದು ನಿರ್ಧರಿಸಿ, ಆ ಬ್ರಾಹ್ಮಣನ ಕಡೆ ಬಂದು "ಮುಹೂರ್ತ ಹೇಳಲು ಬರುತ್ತೀರಾ?" ಎಂದಾಗ, 'ಉದಯ ಕಾಲದಲ್ಲಿ ಬರುತ್ತೇನೆ' ಎಂದನು. ಅವನ ಮಾತನ್ನು ನಂಬಿದ ನಾಪಿತ ಬೆಳಿಗ್ಗೆ ಬೇಗನೇ ಬರುತ್ತಿರುವಾಗ

ನರಭಕ್ಷಕ ಹುಲಿಯೊಂದು ಇವನ ಮುಂದೆ ಬಂದು ಅಟ್ಟಹಾಸ ಮಾಡಿತು. ನನಗಿನ್ನು ಉಳಿಗಾಲವಿಲ್ಲವೆಂದು ಭಾವಿಸಿ, ತನ್ನ ಪತ್ನಿ ಪುತ್ರರ ಗತಿಯೇನು ಎಂದು ಆಲೋಚಿಸಿ, ಏನಾದರೂ ಉಪಾಯ ಮಾಡಬೇಕೆಂದುಕೊಂಡು "ಎಲವೋ ಶಾರ್ದೂಲ, ಸುಖದಿಂದ ಕೊಬ್ಬಿದ ನೀನು ತಾನಾಗೇ ನನ್ನ ವಶವಾಗುತ್ತಿರುವೆ ಬಾ ಮುಂದೆ" ಎಂದು ಅಬ್ಬರಿಸಿದನು.

ನಾಪಿತನ ಧೈರ್ಯ ಅಟ್ಟಹಾಸಕ್ಕೆ ಬೆದರಿದ ಹುಲಿ, ಈ ರೀತಿ ಪ್ರಶ್ನಿಸಿತು. "ಅಟ್ಟಹಾಸಗೈಯುವ ನೀನಾರು?" ಎಂದಿತು. ಆಗ ನಾಪಿತನು "ಎಲವೋ ಮೂಢಜಂತುವೆ, ಇಡೀ ಜಗತ್ತಿಗೆ ಅಧಿಪತಿಯಾಗಿರುವ ಮಹೇಂದ್ರನು ಈಗ ವ್ಯಾಘ್ರಯಜ್ಞವನ್ನು ಮಾಡುತ್ತಿದ್ದಾನೆ. ನನ್ನನ್ನು ಸೇರಿ ಐದು ಜನ ಗಂಧರ್ವರಿಗೆ ಭೂಲೋಕದಿಂದ ತಲಾ ನೂರು ಹುಲಿಗಳನ್ನು ತಂದುಕೊಡಲು ಅಪ್ಪಣೆ ಮಾಡಿದ್ದಾನೆ" ಎಂದನು. "ನಾನೀಗ 94 ಹುಲಿಗಳನ್ನು ಆ ಶಿವನಿಗೆ ಅರ್ಪಿಸಿದ್ದೇನೆ. ಇನ್ನೂ ಆರು ಹುಲಿಗಳು ಬಾಕಿ ಇವೆ. ನಿನ್ನೆ ನಿನ್ನಂತಹ ಒಂದು ಹುಲಿಯನ್ನು ನನ್ನ ಬಗಲಲ್ಲಿ ಸಿಕ್ಕಿಸಿಕೊಂಡಿದ್ದೇನೆ. ಈಗ ನೀನು ಸಿಕ್ಕೆ. ನಿನ್ನ ಸಾಮರ್ಥ್ಯ ನನಗೆ ಗೊತ್ತಿದೆ. ಬೇಗ ಮುಂದಡಿ ಇಡು" ಎಂದು ಘರ್ಜಿಸಿದನು. ಹೆದರಿದ ಹುಲಿ "ಎಲ್ಲಿ ನಿಮ್ಮ ಬಗಲಲ್ಲಿರುವ ಹುಲಿಯನ್ನು ತೋರಿಸಿ" ಎಂದಿತು. ಹುಲಿಯ ಮಾತನ್ನು ಕೇಳಿದ ನಾಪಿತ, "ನನ್ನನ್ನು ಪರೀಕ್ಷಿಸುವಿಯಾ? ನೋಡು" ಎನ್ನುತ್ತಾ ತನ್ನ ಕ್ಷೌರಿಕ ಚೀಲದಲ್ಲಿದ್ದ ಕನ್ನಡಿ ತೆಗೆದು ಹುಲಿಯ ಮುಂದೆ ಹಿಡಿದನು. ಕನ್ನಡಿಯಲ್ಲಿನ ತನ್ನ ಪ್ರತಿಬಿಂಬಕ್ಕೆ ಹೆದರಿದ ಹುಲಿ, ಕೂಡಲೇ ನಾಪಿತನ ಪಾದಕ್ಕೆರಗಿ "ನನ್ನನ್ನು ಬಿಡು. ನಾನು ತಿಂದ ಅನೇಕ ಮನುಷ್ಯರ ರತ್ನ, ಭೂಷಣ, ದ್ರವ್ಯ ನನ್ನ ಗುಹೆಯಲ್ಲಿದೆ ಕೊಡುವೆ" ಎಂದಿತು.

ಇದಕ್ಕೆ ಒಪ್ಪಿದ ನಾಪಿತ ಹುಲಿಯ ಗುಹೆಯಲ್ಲಿದ್ದ ರಾಶಿ ಸಂಪತ್ತನ್ನು ಕಟ್ಟಿಕೊಂಡು "ಎಲವೋ ಶಾರ್ದೂಲ, ನಿನ್ನನ್ನು ಬಿಟ್ಟಿದ್ದೇನೆ ಧರ್ಮದಿಂದ ಬದುಕು. ನನ್ನಂತಹ ನಾಲ್ವರು ಇಲ್ಲಿ ತಿರುಗುತ್ತಿದ್ದಾರೆ. ಅವರಿಗೆ ಕಾಣದಂತೆ ಇರು" ಎಂದು ಎಚ್ಚರಿಸಿ, ಮತ್ತೆ ಹುಟ್ಟಿ ಬಂದೆನೆಂದುಕೊಳ್ಳುತ್ತ ಆ ನಾಪಿತ ತಾನು ತಂದ ದ್ರವ್ಯದಲ್ಲಿ ಅರ್ಧಭಾಗವನ್ನು ಬ್ರಾಹ್ಮಣನಿಗೆ ಕೊಟ್ಟು ಮನೆಗೆ ಹೋದ. ಕೆಲವು ವರ್ಷ ಗತಿಸಿದ ಮೇಲೆ, ಮತ್ತೆ ಮಹಾದೇವನ ಉತ್ಸವಕ್ಕೆ ಹಿಂದೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಕೇವಲ ಆ ಜಗದೊಡೆಯನ ದರುಶನ ಮಾಡಿಕೊಂಡು ಬರಬೇಕೆಂದು ಹೊರಟ. ಇದನ್ನು ಬ್ರಾಹ್ಮಣನಲ್ಲಿ ವಿಚಾರಿಸಿದಾಗ ಇವನು ಮತ್ತೆ ಧನವನ್ನು ತರಲು ಹೊರಟಿದ್ದಾನೆ. ನಾನೂ ಇವನ ಜೊತೆ ತೆರಳಬೇಕೆಂದು ಆಲೋಚಿಸಿ, ನಾಪಿತನೊಡನೆ ಹೊರಟು ನಿಂತ. ಇಬ್ಬರು ಸೇರಿ ಕಾಡಿನಲ್ಲಿ ಬರುತ್ತಿರಬೇಕಾದರೆ, ಈ ಹಿಂದೆ ನಾಪಿತನ ಕೈಯಲ್ಲಿ ಸಿಕ್ಕು ಸಾವಿನಿಂದ ಪಾರಾಗಿದ್ದ ಹುಲಿ ಆ ಕ್ಷಣದಲ್ಲಿ ತಾನು ಪಾರಾದರೆ ತನ್ನ ಜಾತಿಯವರಿಗೆ, ಮಾಂಸದೂಟವನ್ನು ಏರ್ಪಡಿಸುತ್ತೇನೆ ಎಂದು ಬೇಡಿಕೊಂಡ ಪರಿಣಾಮವಾಗಿ, ಅನೇಕ ಹುಲಿಗಳನ್ನು ಕೂಡಿಕೊಂಡು ಬರುತ್ತಿತ್ತು.

ಹುಲಿಗಳನ್ನು ಕಂಡ ನಾಪಿತ ಎಲ್ಲಿ ನೋಡಿದರೂ ಹುಲಿಗಳು ಕಾಣುತ್ತಿವೆ. ಈ ಬ್ರಾಹ್ಮಣನೊಡನೆ ಬಂದು ನಾನು ಸತ್ತೆ ಎಂದುಕೊಂಡ. ಇನ್ನೇನು ಮಾಡುವುದು ಎಂದು ಯೋಚಿಸುತ್ತ ಇವರಿಬ್ಬರೂ ಮರವೇರಿದರು. ಅಷ್ಟರಲ್ಲಿ ಎಲ್ಲ ಶಾರ್ದೂಲ ಸಮೂಹ ಇವರಿಬ್ಬರೂ ಏರಿದ್ದ ಮರದ ಕೆಳಗಡೆಯೇ ಬಂದು ಸೇರಿದವು. ತನ್ನ ಸಮೂಹಕ್ಕೆ ಅನೇಕ ದಿನಗಳಿಂದ ಕೂಡಿಟ್ಟಿದ್ದ ಮನುಷ್ಯ ಮತ್ತು ಮೃಗಗಳ ಶವಗಳನ್ನು ತಂದುಕೊಟ್ಟಿತು. ಹೊಟ್ಟೆ ತುಂಬಿದ್ದ ಆ ವ್ಯಾಘ್ರ ಸಮೂಹ ಜೋರಾಗಿ ಘರ್ಜಿಸಿದವು. ಈ ಘರ್ಜನೆಗೆ ಇಡೀ ಕಾಡೇ ನಡುಗುವಂತಿತ್ತು. ಇದಕ್ಕೆ ಹೆದರಿದ ಬ್ರಾಹ್ಮಣ

ಮರದ ಮೇಲಿಂದ ದೊಪ್ಪನೇ ಆ ವ್ಯಾಘ್ರಗಳ ಮಧ್ಯದಲ್ಲಿಯೇ ಬಿದ್ದನು. ಆಗ ನಾಪಿತ ಉಪಾಯವೊಂದನ್ನು ಯೋಚಿಸಿ ಕೂಡಲೆ ನಾಪಿತನು ಬ್ರಾಹ್ಮಣನಿಗೆ "ಎಲವೋ ಗಂಧರ್ವ, ನೀನು ಧುಮುಕಿದುದು ಒಳ್ಳೆಯದಾಯಿತು. ಮೊದಲು ಆ ಹಿರಿಯನಾದ ಹುಲಿಯನ್ನು ಹಿಡಿಹಿಡಿ" ಎಂದು ಅರಣ್ಯವೇ ಕಂಪಿಸುವಂತೆ ಅಟ್ಟಹಾಸಗೈದನು. ಆಗ ಎಲ್ಲ ಹುಲಿಗಳೂ ತಾವಿನ್ನು ಸಿಕ್ಕೇ ಬಿಡುತ್ತೇವೆಂದು ಹೆದರಿ ಪಲಾಯನ ಮಾಡಿದವು. ಹೀಗೆ ಪಲಾಯನ ಗೈಯುತ್ತಿರುವ ವ್ಯಾಘ್ರ ಸಮೂಹವನ್ನು ಕಂಡ ಒಂದು ನರಿ, "ವ್ಯಾಘ್ರಗಳೇ ಹೀಗೇಕೆ ಓಡುತ್ತಿದ್ದೀರಿ ವಿಷಯವನ್ನು ತಿಳಿಸಿ" ಎಂದಿತು.

ಎಲ್ಲ ವಿಷಯವನ್ನು ಹುಲಿ ಸವಿಸ್ತಾರವಾಗಿ ಹೇಳಿತು. ಅದಕ್ಕೆ ನರಿ, "ಆ ಮಾನವನು, ಮರದ ಮೇಲಿದ್ದವನು ಸಾಯುತ್ತಾನೆಂದು ಹೀಗೆ ಮಾಡಿದ್ದಾನೆ. ಇದಕ್ಕೆ ಪಲಾಯನ ಮಾಡುವುದೇ? ಈ ಕ್ಷಣದಲ್ಲೇ ನಿನ್ನಿಂದಲೇ ಆ ಮನುಷ್ಯನನ್ನು ಕೊಲ್ಲಿಸುತ್ತೇನೆ. ಆ ಸ್ಥಳವನ್ನು ತೋರಿಸು" ಎಂದಿತು. ಸಾಕಿನ್ನು ದೇವರ ಸೇವೆ, ಊರ ಸೇವೆ ಎಂದುಕೊಳ್ಳುತ್ತ ನಾಪಿತ ಮತ್ತು ಬ್ರಾಹ್ಮಣರಿಬ್ಬರೂ ವೇಗವಾಗಿ ಬರುತ್ತಿದ್ದಾಗ, ನರಿಯೊಡನೆ ಮಹಾಶಾರ್ದೂಲ ಬರುವುದನ್ನು ಕಂಡರು. ಈ ನರಿ ತುಂಬಾ ಬುದ್ಧಿವಂತ ಪ್ರಾಣಿ, ಹುಲಿ ಶಕ್ತಿವಂತವಾದದ್ದು. ಇದಕ್ಕೇನಾದರೂ ಉಪಾಯ ಮಾಡಬೇಕೆಂದು ನಾಪಿತ ಯೋಚಿಸಿದನು. ನರಿ ಸಮೀಪಕ್ಕೆ ಬಂದ ಕೂಡಲೇ ನಾಪಿತ "ಎಲವೋ ದುರ್ಜಂತುವೇ ಮೂರು ದಿನದಲ್ಲಿ ಐದು ಹುಲಿಗಳನ್ನು ಹಿಡಿದು ಕೊಡುತ್ತೇನೆ ಎಂದು ಹೇಳಿ ಐದು ದಿನದಲ್ಲಿ ಒಂದು ಹುಲಿಯನ್ನು ತಂದೆಯಾ?" ಎಂದು ಗರ್ಜಿಸುತ್ತ ಕಲ್ಲನ್ನು ಬೀಸಿದ. ಇದೆಲ್ಲವನ್ನು ಕೇಳಿಸಿಕೊಂಡ ಹುಲಿ ಈ ನರಿ ತನ್ನನ್ನು ಮೋಸದಿಂದ ಗಂಧರ್ವನಿಗೆ ಒಪ್ಪಿಸಲು ಕರೆತಂದಿದೆ ಎಂದು ತಿಳಿದು, ದಿಕ್ಕೆಟ್ಟು ಓಡಿತು. ನರಿ ಕಲ್ಲಿನ ಪ್ರಹಾರಕ್ಕೆ ಅಸುನೀಗಿತು. ಕೂಡಲೆ ನಾಪಿತ ಬ್ರಾಹ್ಮಣನೊಂದಿಗೆ ಅರಣ್ಯವನ್ನು ದಾಟಿ ಇಂದು ಮತ್ತೊಮ್ಮೆ ಹುಟ್ಟಿ ಬಂದೆವು ಎಂದುಕೊಳ್ಳುತ್ತ ಊರು ಸೇರಿದರು.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:** [5×5=25]

(a) ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕಥೆ ಯಾವುದು?

(b) ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.

(c) ವ್ಯಾಘ್ರಗಳ ಮಧ್ಯೆ ಬಿದ್ದ ಬ್ರಾಹ್ಮಣನನ್ನು ಉಳಿಸಿಕೊಳ್ಳಲು ನಾಪಿತ ಮಾಡಿದ ಉಪಾಯವೇನು?

(d) ಪಲಾಯನ ಮಾಡುತ್ತಿದ್ದ ಹುಲಿಯನ್ನು ನರಿ ಹೇಗೆ ಸಮಾಧಾನಪಡಿಸಿ ಹಿಂದಕ್ಕೆ ಕರೆತಂದಿತು?

(e) "ಮತ್ತೊಮ್ಮೆ ಹುಟ್ಟಿ ಬಂದೆವು" ಎಂದು ನಾಪಿತನು ಅಂದುಕೊಳ್ಳಲು ಕಾರಣವೇನು?

**3. ಸಂಕ್ಷಿಪ್ತ ಲೇಖನ** / (Precis Writing) [25]

**ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ ಹಾಗೂ ಸೂಕ್ತ ಶೀರ್ಷಿಕೆ ನೀಡಿ.**

ಮೃದುಲಳ ಮನಸ್ಸು ಅವಳ ನಾಮಧೇಯಕ್ಕೆ ತಕ್ಕಂತೆ ಮೃದುವಾಗಿಯೇ ಇತ್ತು. ಐದು ಅಡಿ ಎತ್ತರದ ಗೋಧಿ ಬಣ್ಣದ ಗೌರವಾನ್ವಿತ ಹೆಣ್ಣು. ಕಾಸಗಲದ ಕಣ್ಣು, ಸಂಪಿಗೆಯಂಥ ನಾಸಿಕ, ಉಂಗುರಾಕಾರದ ಕಪ್ಪು ಹೆರಳು. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನಿಸುವಂತಿದ್ದು, ಪದವಿಯೊಂದಿಗೆ ಕಂಪ್ಯೂಟರ್ ನಡೆಸುವ ಸಾಮರ್ಥ್ಯ ಹೊಂದಿದ್ದಳು. ಏಕಮಾತ್ರ ಪುತ್ರಿಯಾದ ಕಾರಣ, ಮನೆಯಲ್ಲಿ ಅತೀ ಪ್ರೀತಿಯಿಂದ ಬೆಳೆಸಿದ್ದರು. ಎಲ್ಲಿ ಹೆಚ್ಚು ನಡೆದರೆ ಸವೆದು ಹೋಗುತ್ತಾಳೋ ಎಂದು ಭಾವಿಸಿ ಎಚ್ಚರವಹಿಸಿದ್ದರು. ಹೆತ್ತವರು ತಮ್ಮ ಮಗಳಿಗೆ ಯೋಗ್ಯ ಮನೆತನಕ್ಕೆ ಸೇರಿದ ವರನೊಂದಿಗೆ ವಿವಾಹ ಮಾಡಿದ್ದರು.

ಮೃದುಲ ಸಂಧ್ಯಾ ಕಾಲದವರೆಗಿನ ಕೆಲಸ ಮುಗಿಸಿ, ತನ್ನ ವಿವಾಹ ಕಾಲದ ಆರಂಭದ ದಿನಗಳನ್ನು ನೆನೆಯತೊಡಗಿದಳು. ಮೂಗಿನ ತುದಿಯಲ್ಲೇ ಕೋಪ ಇರಿಸಿಕೊಂಡಿದ್ದ ಮಾವ ಅಚ್ಚುತರಾಯರು, ಅತ್ತೆ ಸುನಂದಮ್ಮ ನೋಡಲು ಲಕ್ಷಣವಾಗಿದ್ದರೂ ಗತ್ತಿಗೇನು ಕಡಿಮೆ ಇಲ್ಲ. ತೀಕ್ಷ್ಣ ನೋಟದಿಂದಲೇ ಎಲ್ಲರನ್ನಾಳುತ್ತಿದ್ದ ರಾಯರ ವರ್ತನೆಗೆ ಮೊದ–ಮೊದಲು ಮೃದುಲ ಬೆಚ್ಚಿದ್ದಳು. ಆದರೂ ಹೊಂದಿಕೊಂಡು ಹೋಗುವ ಸೆಣಸಾಟ ನಡೆಸಿದ್ದಳು.

ಅಕ್ಕ–ಭಾವ ನಾದಿನಿಯರ ನಡುವೆ ಸಿಲುಕಿ ಬೆಂಡಾಗಿದ್ದಳು. ಆಕೆಯ ಪತಿ ಚಂದ್ರಕಾಂತನಿಗೆ ಇದೆಲ್ಲವೂ ಅಭ್ಯಾಸವಾಗಿದ್ದು, ಪ್ರೀತಿಯಿಂದ ಮೃದುಲಳಿಗೆ ರಮಿಸುತ್ತಾ ನೋವ ಮರೆಸುವ ಇರುಳಿನ ಚಂದ್ರಮನೆ ಆಗಿದ್ದ.

ಮುಂಜಾನೆ ಐದು ಗಂಟೆಗೆ ಎದ್ದು ಅಕ್ಕ ಶ್ರೀದೇವಿಗೆ ಅಡಿಗೆ ಮನೆಯಲ್ಲಿ ಸಹಕರಿಸಬೇಕು. ಬಾಗಿಲಿಗೆ ನೀರು ಹಾಕಿ ರಂಗೋಲಿ ಇಟ್ಟು ಅಚ್ಚುಕಟ್ಟಾಗಿ ಮನೆಗುಡಿಸಿ ಒರೆಸಬೇಕು. ಅತ್ತೆಯೊಂದಿಗೆ ಮಾವನ ಪೂಜಾ ಸಾಮಾಗ್ರಿಗಳನ್ನು ಜೋಡಿಸಿ ಹೂ–ಪತ್ರೆ ಬಿಡಿಸಿ ತರುವುದು, ಹೀಗೆ ಹತ್ತಾರು ಕೆಲಸಗಳಿಂದ ಹೊತ್ತು ಹೋಗುತ್ತಿದ್ದುದು ತಿಳಿಯುತ್ತಲೇ ಇರಲಿಲ್ಲ. ಅಪ್ಪನ ಲಕ್ಷ್ಮಣ ರೇಖೆ ದಾಟಿ ಹೋಗುವ ಸಾಹಸ ಮನೆಯಲ್ಲಿ ಯಾರಿಗೂ ಇರಲಿಲ್ಲ. ಆಗಾಗ ಪತಿಯ ಬಳಿ ಬೇರೆ ಮನೆಮಾಡಿ ಹೋಗುವ ವಿಚಾರ ತಿಳಿಸಿದರೂ ಚಂದ್ರಕಾಂತ ಅವಳ ಮಾತಿಗೆ ಸೊಪ್ಪು ಹಾಕಲಿಲ್ಲ. ಏಕೆಂದರೆ ತಂದೆ ಎದುರಿಗೆ ನಿಂತು ಅದನ್ನೆಲ್ಲ ಕೇಳುವ ಧೈರ್ಯ ಆತನಲ್ಲಿರಲಿಲ್ಲ. ಈ ವಿಚಾರ ಬಂದ ಕೂಡಲೇ ಮೌನವಹಿಸುತ್ತಿದ್ದ. ಪದವೀಧರೆಯಾದ ಮೃದುಲ ಪಟ್ಟಣದಲ್ಲಿ ವ್ಯಾಸಂಗ ಮಾಡಿ ಬಂದವಳು. ಹಾಗಾಗಿ ಚೂಡಿ–ಮಿಡಿ ಎಲ್ಲವನ್ನು ಧರಿಸುತ್ತಿದ್ದಳು. ಈಗ ಮಿಡಿ ಧರಿಸುವುದಿರಲಿ ಚೂಡಿ ಕೂಡ ಧರಿಸುವಂತಿರಲಿಲ್ಲ. ಅವಳದ್ದೇನು ದೈತ್ಯ ದೇಹವಲ್ಲ. ಚೂಡಿ ಧರಿಸಿದರೆ ಮತ್ತಷ್ಟು ಅಂದವಾಗಿ ಕಾಣುತ್ತಿದ್ದಳು. ಆದರೆ ಮಾವನ ಆಜ್ಞೆಯಿಂದ ಅವುಗಳನ್ನೆಲ್ಲ ದೂರ ಇರಿಸಬೇಕಾಯಿತು. ಅಚ್ಚುತರಾಯರ ಹಿರಿಯ ಮಗ ಶ್ರೀನಾಥ ಅವನ ಹೆಂಡತಿ ಶ್ರೀದೇವಿ ಎಂದರೆ ರಾಯರಿಗೆ ತುಂಬಾ ಅಚ್ಚುಮೆಚ್ಚು.

ಹಾಗಾಗಿ ಅವರೇನೇ ತಪ್ಪು ಮಾಡಿದರೂ ಕಣ್ಣಿಗೆ ಗೋಚರಿಸುತ್ತಿರಲಿಲ್ಲ. ಅತ್ತೆಯಾಗಲಿ ಅವರನ್ನು ಅಲ್ಲಗಳೆಯುತ್ತಿರಲಿಲ್ಲ. ಅವರಿಗೆ ಎರಡೂ ಹೆಣ್ಣುಮಕ್ಕಳು ಹಿರಿಯ ಮಗಳು ಸಾರಿಕ ಮೃದುಲಳಿಗಿಂತ ಎಂಟು ಹತ್ತು ವರ್ಷ ಚಿಕ್ಕವಳಿರಬಹುದು. ದೂರದ ಬೆಂಗಳೂರಿನಲ್ಲಿ ನರ್ಸಿಂಗ್ ಟ್ರೈನಿಂಗ್ ಕಲಿಯುತ್ತಿದ್ದ ಆಕೆ ಹಾಕದಿರುವ ವೇಷವಿಲ್ಲ. ಅಜ್ಜನಿಗೆ ತನ್ನ ಮೊಮ್ಮಕ್ಕಳ ಮೇಲೆ ಅಷ್ಟು ಅಕ್ಕರೆ. ಕಿರಿಯ ಹುಡುಗಿ ಸುನೈನಾ ಪಿ.ಯು.ಸಿ. ಕಲಿಯುತ್ತಿದ್ದಳು. ಅಡಿಗಡಿಗೆ ತನ್ನ ಕಂಡರೆ ಕಿಡಿ ಕಾರುವ ಮಾವನನ್ನು ನೋಡಿ ಮೃದುಲ ಬೇಸತ್ತಿದ್ದಳು. ನಿಂತರು ಕಷ್ಟ, ಕುಳಿತರು ಕಷ್ಟ ಎನ್ನುವಂತೆ ಇತ್ತು ಆಕೆಯ ಪರಿಸ್ಥಿತಿ. ಅಂಥ ಪರಿಸ್ಥಿತಿಯಲ್ಲಿ ಗರ್ಭಿಣಿಯಾಗಿದ್ದ ಈಕೆ ಮೊದಲ ಹೆರಿಗೆಗಾಗಿ ತನ್ನ ತವರೂರಿಗೆ ಹೊರಟು ನಿಂತಳು. ತವರ ಸೇರಿ ತಂದೆ–ತಾಯಿಯರ ಆರೈಕೆಯಲ್ಲಿ ದಿನ ಕಳೆದದ್ದೇ ತಿಳಿಯಲಿಲ್ಲ. ಹೆರಿಗೆ ನೋವು ಆರಂಭಗೊಂಡಾಗ ತಂದೆ ಪೇಟೆಯಲ್ಲಿ ಒಳ್ಳೆ ನರ್ಸಿಂಗ್ ಹೋಮ್‌ಗೆ ಸೇರಿಸಿದರು. ಹೆರಿಗೆ ಸುಸೂತ್ರವಾಗಿ ಗಂಡು ಮಗುವಿಗೆ ತಾಯಿಯಾಗಿ ಮನೆಗೆ ಹಿಂದಿರುಗಿದಳು. ತಾಯಿ, ಪ್ರೀತಿಯಿಂದ ಬಾಣಂತಿಯ ಆರೈಕೆ ಮಾಡಲು ಕಣ್ಣು ತುಂಬಿ ಬರುತ್ತಿತ್ತು. ಅತ್ತೆಯ ಮನೆಯ ಪರಿಸ್ಥಿತಿ ನೆನೆದು ಆಗ ಮೃದುಲ ತಾಯಿ ತಂದೆಯ ಬಳಿ ಹೇಳಿ ಕಣ್ಣೀರು ಹಾಕಿದ್ದಳು. ಹೆತ್ತ ಮಗಳಿಂದ ವಿಚಾರ ತಿಳಿದು ಮಮ್ಮಲ ಮರುಗಿದರು. ಎಂಥ ಮನೆಗೆ ಕೊಟ್ಟು ಮದುವೆ ಮಾಡಿದೆವಲ್ಲ ಎಂದು ಪಶ್ಚಾತ್ತಾಪಪಡುತ್ತಿದ್ದರು. ಈಗೇನು ಮಾಡುವಂತಿರಲಿಲ್ಲ. ಬಾಣಂತಿ ಬೇರೆ ಈ ಸಮಯದಲ್ಲಿ ಅವಳು ಮಾನಸಿಕವಾಗಿ ನೊಂದುಕೊಳ್ಳದಿರುವಂತೆ ನೋಡಲು ಯತ್ನಿಸಿದರು. ಸಮಾಧಾನದ ಮಾತುಗಳನ್ನು ಆಡುತ್ತಿದ್ದರೂ ಒಮ್ಮೊಮ್ಮೆ ಮೃದುಲ ನಾನು ಆ ಮನೆಗೆ ಹೋಗಲಾರೆ. ಇಲ್ಲೇ ಇರುತ್ತೇನೆ ಎನ್ನುವಾಗ ಅಪ್ಪ ಅಮ್ಮನ ಬಾಯಿ ಕಟ್ಟಿ ಹೋಗಿತ್ತು. ಮಗಳ ಬಗ್ಗೆ ಕೊರಗತೊಡಗಿದರು. ಅದನ್ನು ಬಿಟ್ಟು ಬೇರೇನು ಮಾಡುವಂತಿರಲಿಲ್ಲ. ಮಗುವಿಗೆ ನಾಲ್ಕು ತಿಂಗಳು ಕಳೆಯಲು ಪತಿ ಕರೆದೊಯ್ಯಲು ಬಂದಾಗ ತಾನು ಅಲ್ಲಿಗೆ ಬರಲಾರನೆಂದು ಹಠ ಮಾಡಿದಳು. ಆದರೆ, ಗಂಡನ ಪ್ರೀತಿಗೆ ಮಣಿಯಲೇ ಬೇಕಾಯ್ತು. ಅವಳು ಅತ್ತೆ ಮನೆಗೆ ಹೊರಟಾಗ ತಂದೆ ತಾಯಿ ಕಣ್ಣೀರು ಇಟ್ಟರೂ ಅಳಿಯನಲ್ಲಿ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಬೇಡಿಕೊಂಡರು. ಮೃದುಲ ಅತ್ತೆ ಮನೆಗೆ ಕಾಲಿರಿಸಿದಳು. ತವರೂರಿನಲ್ಲಿ ತಾಯಿಯ ಪ್ರೀತಿಯ ಆರೈಕೆಯಿಂದ ಸಂತೋಷವಾಗಿದ್ದಳು. ಯಾವುದೇ ಕೆಲಸ ಮಾಡಲು ತಾಯಿ ಬಿಡುತ್ತಿರಲಿಲ್ಲ. ಮನೆ ಕೆಲಸದವರು ಕೂಡ ಇದ್ದರು. ಹಾಗಾಗಿ ಸದಾ ವಿಶ್ರಾಂತಿಯಲ್ಲಿದ್ದ ಮೃದುಲಳಿಗೆ ಕುಳಿತಿರಲು ಸಾಧ್ಯವೆ? ತನ್ನ ಪಾಲಿನ ಕೆಲಸವನ್ನೆಲ್ಲಾ ಮಾಡಲೇಬೇಕಿತ್ತು. ಆದರೆ ಮಗುವಿನ ಆರೈಕೆಯೊಂದಿಗೆ ಮನೆಗೆಲಸ ಮಾಡಲು ಕಷ್ಟವಾಗಿತ್ತು. ಸಣ್ಣಪುಟ್ಟ ಕೆಲಸಕ್ಕೂ ಮೃದುಲ ಎಂದು ಕೂಗು ಹಾಕುತ್ತಿದ್ದರು. ಮಗುವಿನ ಆಗಮನದಿಂದ ಅದರ ಆಟ ನಗುವಿನಲ್ಲಿ ಆಕೆಯ ಕಷ್ಟಗಳನ್ನೆಲ್ಲ ಮರೆತಳು. ಮಗುವಿನ ಆರೈಕೆಯಲ್ಲಿ ಆಕೆಗೆ ಒಂದು ವರ್ಷ ಕಳೆದದ್ದೆ ತಿಳಿಯಲಿಲ್ಲ. ಮಗುವಿನ ಹುಟ್ಟುಹಬ್ಬವನ್ನು ಮನೆಯಲ್ಲಿ ಅದ್ದೂರಿಯಾಗಿಯೇ ಆಚರಿಸಿದರು. ಮಗುವಿಗೆ ಒಂದೂವರೆ ವರ್ಷ ತುಂಬುತ್ತಲೇ ಮೃದುಲ ಮತ್ತೆ ಗರ್ಭಿಣಿ, ಊಟ ಸೇರದೆ ನಿತ್ರಾಣದಿಂದ ಬಳಲಿದಳು. ನವ ಮಾಸ ತುಂಬಿದಾಗ ತವರೂರಿಗೆ ಕಳಿಸಲು ಅತ್ತೆ ಮಾವ ಒಪ್ಪಿದರು.

ಮಗಳು ಮನೆ ಸೇರಿದಾಗ ತಂದೆ-ತಾಯಿಗೆ ಎಲ್ಲಿಲ್ಲದ ಸಂಭ್ರಮ. ಮನೆ ತುಂಬಾ ತಪ್ಪು ಹೆಜ್ಜೆ ಇಡುತಿದ್ದ ಮಗು ಬೇರೆ. ಅಂತೂ ಎರಡನೆ ಹೆರಿಗೆಯಲ್ಲೂ ಮೃದುಲ ಗಂಡು ಮಗುವಿನ ತಾಯಾದಳು. ತಾಯಿ ಶಶಿಕಲ ತಂದೆ ಶಿವಶಂಕರರ ಆರೈಕೆ ಕೇಳಬೇಕೆ? ಒಬ್ಬಳೆ ಮಗಳು ಬೇರೆ. ತಾಯಿ ವಾತ್ಸಲ್ಯ ಧಾರೆಯನ್ನೇ ಹರಿಸಿ ನೋಡಿಕೊಂಡರು. ತಂದೆಯ ಪ್ರೀತಿಗೇನು ಕೊರತೆ ಇರಲಿಲ್ಲ. ಮೃದುಲ ನೆಮ್ಮದಿಯ ದಿನಗಳನ್ನು ಕಳೆಯತೊಡಗಿದಳು.

ಹೀಗೆ ಒಮ್ಮೆ ಕಟುಕ ಮಾವನ ನೆನೆದಳು. ಅವರು ಮಹಾ ಸಂಪ್ರದಾಯಸ್ಥ. ಜಾತಿ ಭಾವನೆ ತಾಂಡವವಾಡುತ್ತಿದ್ದ ಮುಖಮುದ್ರೆ. ಹಾಗೆ ಆಚಾರ ವಿಚಾರಗಳಲ್ಲಿ ಕೂಡ, ಮಡಿ-ಮೈಲಿಗೆಯಲ್ಲಿ ಕಟ್ಟುನಿಟ್ಟು. ಅವರ ದೈತ್ಯದೇಹಕ್ಕೆ ರೀತಿನೀತಿಗೆ ಯಾರಾದರೂ ಹೆದರಲೇಬೇಕು. ತೋಟದ ಆಳುಗಳಂತು ಅವರಿದ್ದೆಡೆ ಸುಳಿಯುತ್ತಲೇ ಇರಲಿಲ್ಲ. ಬೆದರಿ ದೂರ ಉಳಿಯುತ್ತಿದ್ದರು. ನಗೆ ಎಂಬುದೇ ಅವರ ಮುಖದಲ್ಲಿ ಮಾಯ. ಸದಾ ದರ್ಪ, ಹುಕುಂ. ಅವರನ್ನು ನೆನೆದು ನಿಟ್ಟುಸಿರು ಬಿಟ್ಟಳು. ಮೃದುಲ ಎರಡನೆ ಹೆರಿಗೆ ಮುಗಿಸಿ ಬರುವ ಮುನ್ನ ಮನೆಯಲ್ಲಿ ಮಹತ್ತರ ಬದಲಾವಣೆಗಳಾಗಿದ್ದವು. ಹಿರಿಯ ಮೊಮ್ಮಗಳು ಸಾರಿಕ ಬೇರೆ ಕುಲದವನನ್ನು ಪ್ರೀತಿಸಿ ಆತನೊಂದಿಗೆ ಬೆಂಗಳೂರಿನಿಂದ ಡೆಲ್ಲಿಗೆ ಪಲಾಯನಗೈದಿದ್ದಳು. ಅವನೊಂದಿಗೆ ರಿಜಿಸ್ಟರ್ ಮ್ಯಾರೇಜ್ ಆಗಿರುವಳೆಂಬ ಗಾಳಿಸುದ್ದಿ ಎಲ್ಲೆಡೆಗೂ ಹಬ್ಬಿತ್ತು.

ತಂದೆ-ತಾಯಿಗೆ ಫೋನಾಯಿಸಿ ಎಷ್ಟೋ ದಿನಗಳ ನಂತರ ನೇರವಾಗಿ ವಿಚಾರ ತಿಳಿಸಿದ್ದಳು. ಅದಕ್ಕೂ ಮೊದಲೇ ಆಕೆಯ ಸಹಪಾಠಿಗಳಿಂದ ವಿಚಾರ ತಿಳಿದಿದ್ದರು. ಈಗ ಶ್ರೀನಾಥ ಶ್ರೀದೇವಿಯ ಮೇಲೆ ಆಕಾಶವೇ ಕಳಚಿ ಬಿದ್ದಂತೆ ಆಯ್ತು. ಶ್ರೀನಾಥನಿಗೆ ತಂದೆಯ ಎದುರು ನಿಂತು ಆ ವಿಚಾರ ತಿಳಿಸಲಾಗದೆ ತಾಯಿಯನ್ನು ತೋಟಕ್ಕೆ ಕರೆದೊಯ್ದು ವಿಚಾರ ತಿಳಿಸಿದ. ಸುನಂದಮ್ಮ ಮಗನಿಗಷ್ಟು ಛೀಮಾರಿ ಹಾಕಿದಳು. ಸಮಯ ಸಾಧಿಸಿ ಸುನಂದಮ್ಮ ಗಂಡನ ಬಳಿ ಆ ವಿಚಾರ ಸೂಕ್ಷ್ಮವಾಗಿ ತಿಳಿಸಿದಳು. ಅಚ್ಚುತರಾಯರಿಗೆ ಅದನ್ನು ಕೇಳುತ್ತಿದ್ದಂತೆ, ಅವರ ಸಂಪ್ರದಾಯಕ್ಕೆ ಗರಬಡಿಯುವುದಿರಲಿ ಅವರೇ ಗರಬಡಿದವರಂತೆ, ಮೌನ ತಾಳಿದರು. ಮೈಲಿಗೆ ಅವರನ್ನೇ ಆವರಿಸಿದಂತಿತ್ತು.

ಮೃದುಲ ತನ್ನ ಮಕ್ಕಳು ಬೆಳೆಯತೊಡಗಿದಾಗ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಪಟ್ಟಣದಲ್ಲಿ ಮನೆ ಮಾಡೋಣ ಎಂದು ಹೊರಹೋಗ ಬಯಸಿ ಪತಿಯ ಬಳಿ ಗೋಗರೆದಳು. ಅಪ್ಪ ಮೊದಲೇ ನೊಂದಿದ್ದಾರೆ. ಇನ್ನು ಅವರ ಮುಂದೆ ನಿಂತು ಈ ವಿಚಾರ ಹೇಳಲು ನನ್ನಿಂದ ಅಸಾಧ್ಯ ಎಂದು, ಗಂಡ ಇಲ್ಲೇ ಇರಬೇಕೆಂದು ಅಣತಿ ಮಾಡಿದಾಗ ಅದಕ್ಕೆ ಕಿವಿಗೊಡದಿರದಾಗದು ಎಂದು ಮೌನವಾದಳು. ಅಚ್ಚುತರಾಯರ ಗಂಡು ಮಕ್ಕಳಿಬ್ಬರೂ ಅಪ್ಪ ಹಾಕಿದ ಗೆರೆ ದಾಟದವರು! ಮನೆಬಿಟ್ಟು ಹೋಗುವರೇ? ಹಾಗಾಗಿ, ಮೃದುಲ ಅಲ್ಲೇ ಹೊಂದಿಕೊಂಡು ಹೋಗುವುದು ಅನಿವಾರ್ಯವಾಯ್ತು. 'ದರ್ಪ-ಗರ್ವ' ದೂರಾದ ಮಾವನನ್ನು ನೋಡಿ ಸ್ವಲ್ಪ ಮನೆಯಲ್ಲಿ ಹೊಂದಿಕೊಳ್ಳಲು ಕಷ್ಟವೆನಿಸಲಿಲ್ಲ. ಸುನಂದಮ್ಮ ಗಂಡನ ಸ್ಥಿತಿ ನೋಡಿ ಮೆತ್ತಗಾಗಿದ್ದರು. ಎಲ್ಲಾ ಇದ್ದೂ ಯಾರಿಗೂ ಸ್ವತಂತ್ರವಿರಲಿಲ್ಲ. ಎಲ್ಲರೂ ಬಂಗಾರದ ಪಂಜರದೊಳಗಿನ ಗಿಳಿಗಳಂತೆ ಬದುಕುತ್ತಿದ್ದರೂ ಅಂಥ ಬಂಗಾರದ ಪಂಜರದಿಂದಲೂ ಹಿರಿಯ ಮೊಮ್ಮಗಳು ಬಹುದೂರ ಹಾರಿ ತನ್ನ ಬಾಳ ಪಯಣದಲ್ಲಿ ಮುನ್ನಡೆದಿದ್ದಳು.

**4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ.** [25]

A rich man can buy almost everything in the world. He can own an aeroplane, a luxury yacht and a number of beautiful Cars. But there is one thing that he cannot buy good health. Good health is man's most precious possession. A healthy mind is a healthy body. Good health and a sound mind always go together. Without a healthy body man can neither think great thoughts nor perform great acts. Good food is essential for good health. Besides, good food our body require fresh air, clean water and a lot of good exercise to stay healthy and strong. Sleep and rest are equally important. We must give sufficient time for them.

## SECTION—B / ವಿಭಾಗ—B

**5.** ಪತ್ರ ಲೇಖನ/**Letter Writing**

ಈ ಕೆಳಗಿನ ವಿಷಯವನ್ನು ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. [10]

I. ವಿದ್ಯಾಭ್ಯಾಸದ ಗುರಿ

ವಿಶೇಷ ಸೂಚನೆ:–

**(ಗೆ, ವಿಳಾಸ–ಸಂಪಾದಕರು, ನವಭಾರತ ಪತ್ರಿಕೆ, ಬೆಂಗಳೂರು ಇವರಿಗೆ ಮತ್ತು**

**ಇಂದ ವಿಳಾಸ–xxx, ಸಂಖ್ಯೆ.1, YYY ರಸ್ತೆ, ZZZ-ಸ್ಥಳ) – ಕಾಲ್ಪನಿಕವಾಗಿ ನೀಡಲಾಗಿರುವ ಈ ಮೇಲಿನ ವಿಳಾಸಗಳನ್ನಷ್ಟೇ ಬಳಸಿ ಪತ್ರ ಬರೆಯಲು ಸೂಚಿಸಿದೆ. ಇದರ ಹೊರತಾಗಿ ಬೇರೆ ಯಾವುದೇ ಹೆಸರನ್ನಾಗಲೀ, ವಿಳಾಸವನ್ನಾಗಲೀ ಸಹಿಯನ್ನಾಗಲೀ ಪತ್ರ ಲೇಖನದಲ್ಲಿ ಬರೆಯಬಾರದು. ಈ ರೀತಿಯ ಯಾವುದೇ ನಮೂದು ಬರೆದಲ್ಲಿ ಪ್ರಶ್ನೆಸಹಿತ ಉತ್ತರ ಪುಸ್ತಿಕೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು. ಮತ್ತು "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿತ್ವವನ್ನು ರದ್ದುಗೊಳಿಸುವುದಲ್ಲದೇ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ.**

**6.** ಈ ಕೆಳಗಿನ ಎರಡು ಗಾದೆಗಳಿಗೆ ಅರ್ಥಸ್ವಾರಸ್ಯವನ್ನು ವಿವರಿಸಿ. [2×5=10]

*(a)* ಕಾಣದಕ್ಕೆ ಕೈಚಾಚಿ ಕೈಯಲ್ಲಿದ್ದಿದ್ದನ್ನು ಕಳೆದುಕೊಂಡಂತೆ

*(b)* ತೃಪ್ತ ಮನಸ್ಸಿದ್ದರೆ ದಿನವೂ ಹಬ್ಬವೇ.

**7.** ಈ ಕೆಳಗಿನ **ನುಡಿಗಟ್ಟುಗಳಿಗೆ ಅರ್ಥ** ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. [2×3=6]

*(a)* ಅನ್ನಕ್ಕೆ ಕಲ್ಲುಹಾಕು

*(b)* ಎಂಜಲಿಗೆ ಕೈಯೊಡ್ಡು

**8.** **ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ.** [1×4=4]

*(a)* ಕೆಲವು ತಪುಗಳನು ತಿದ್ದಿಕೊಲ್ಲಲು ಅವಕಸವಿದೆ.

*(b)* ಅಳ್ಳಿಯಲ್ಲಿ ಹವರ ಸ್ತಾನ ಹೆತ್ತರಕ್ಕೆರಿದೆ

*(c)* ಎರೆಡು ದಿನ ವಿಸ್ರಾಂತಿ ತೆಗೆದುಕೊಂಡು ಅವರು ಸಾಕಸ್ಟು ಸುದಾರಿಸಿಕೊಂಡರು.

*(d)* ಸಾವ್ರಜನಿಕ ಹಾಸ್ಪತ್ರೆಯಲ್ಲಿ ಐಸಿಯು ಗಟಕ ಆರಂಬವಗಿದೆ.

**9.** ಈ ಕೆಳಗಿನವುಗಳಿಗೆ **ತತ್ಸಮ–ತದ್ಭವ** ರೂಪಗಳನ್ನು ಬರೆಯಿರಿ. [1×5=5]

*(a)* ಅಭ್ಯಾಸ

*(b)* ಹಂಸ

*(c)* ಸ್ಥಳ

*(d)* ಯಾಗ

*(e)* ಪ್ರಲಯ

**10.** ಈ ಕೆಳಗಿನವುಗಳನ್ನು **ಬಿಡಿಸಿ** ಬರೆಯಿರಿ. [1×5=5]

*(a)* ರಸಾನುಭವ

*(b)* ಏಕೈಕ

*(c)* ಹೆಮ್ಮರ

*(d)* ಅರುಣೋದಯ

*(e)* ಕಟ್ಟೋಗರ

**11.** ಈ ಕೆಳಗಿನವುಗಳಿಗೆ **ಅರ್ಥ** ಬರೆಯಿರಿ. [1×5=5]

*(a)* ದ್ರವ್ಯ

*(b)* ಸುಮ

*(c)* ದರ್ಪಣ

*(d)* ತನುಜ

*(e)* ಒಡಲು

**12.** ಈ ಕೆಳಗಿನವುಗಳಿಗೆ **ವಿರುದ್ಧಾರ್ಥಕ** ಪದ ಬರೆಯಿರಿ. [1×5=5]

*(a)* ಆಡಂಬರ

*(b)* ಮುಳುಗು

*(c)* ಅಂತರಂಗ

*(d)* ಜಾಣ

*(e)* ಪಾಪ

* * *